(ಇಂದು ದಿನಾಂಕ 24-08-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – 4 ನೇ ಪ್ರತಿವಾದಿ ಪರ ಶ್ರೀ ಕೆ.ಆರ್.ಡಿ. ವಕೀಲರಿಂದಃ**

ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಕೆ.ಬಿ.ಎನ್. ವಕೀಲರಿಂದಃ**

ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಚ್.ಎಸ್.ಎಸ್. ವಕೀಲರಿಂದಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಎ.ಕೆ.ಡಿ. ವಕೀಲರಿಂದಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ವಿ.ಬಿ. ವಕೀಲರಿಂದ**

ನಾನು ಈಗ ರಾಜಕಾರಣಿ ಮತ್ತು ವ್ಯವಹಾರಸ್ಥ ಎಂದರೆ ಸರಿ. ರಾಜಕಾರಣದಲ್ಲಿ ಸುಮಾರು 5-10 ವರ್ಷಗಳಿಂದ ಇದ್ದೇನೆ. ನಾನು ಕಳೆದ 15-20 ವರ್ಷಗಳಲ್ಲಿ ನನ್ನ ಹಾಗೂ ಕುಟುಂಬದ ಸದಸ್ಯರ ಹೆಸರಿನಲ್ಲಿ ಕಾರವಾರ - ಅಂಕೋಲಾ ತಾಲೂಕಿನಲ್ಲಿ ಸುಮಾರು 100 ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ. ಆ ಕಾರಣ ಆಸ್ತಿ ಖರೀದಿ ಮಾಡುವ ಬಗ್ಗೆ ನನಗೆ ಮಾಹಿತಿ ಇದೆ. ಆದರೆ ನಾನು ವಕೀಲರ ಬಳಿ ಅಭಿಪ್ರಾಯ ಪಡೆದು ಖರೀದಿ ಮಾಡಿರುತ್ತೇನೆ. ದಾವಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ಬೆಂಗಳೂರಿನ ಮೂರ್ತಿ ನಾಯ್ಕ ವಕೀಲರ ಬಳಿ ಅಭಿಪ್ರಾಯವನ್ನು ಪಡೆದಿರುತ್ತೇನೆ. ಸದರಿ ಅಭಿಪ್ರಾಯದ ಪ್ರತಿ ನನ್ನ ಬಳಿ ಇರುವುದಿಲ್ಲ. ನಾನು ಮೌಖಿಕವಾಗಿ ಅವರ ಬಳಿ ಅಭಿಪ್ರಾಯ ಕೇಳಿರುತ್ತೇನೆ. ದಾವಾಸ್ತಿಯ ಮೂಲ ಕ್ರಯಪತ್ರ ನನ್ನ ಬಳಿ ಇದೆ. ಮೂಲ ಕ್ರಯಪತ್ರವನ್ನು

ಹಾಜರುಪಡಿಸಲು ತೊಂದರೆ ಇಲ್ಲ. ವಾದಿಯರು ದೃಢೀಕೃತ ನಕಲನ್ನು ಹಾಜರುಪಡಿಸಿದ್ದರಿಂದ ನಾನು ಹಾಜರು ಮಾಡಿಲ್ಲ. ದಾವಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ಪತ್ರಿಕೆಯಲ್ಲಿ ಪ್ರಕಟಣೆಯನ್ನು ಕೊಟ್ಟಿರುವುದಿಲ್ಲ. ದಾವಾಸ್ತಿಯನ್ನು ಖರೀದಿಸಿದ ನಂತರವೂ ಸಹ ಯಾವುದೇ ಪತ್ರಿಕೆ ಪ್ರಕಟಣೆಯನ್ನು ಕೊಟ್ಟಿರುವುದಿಲ್ಲ. ನಾನು ರಾಜಕಾರಣಿಯಾಗಿರುವುದರಿಂದ ಆಗಾಗ ಸಾರ್ವಜನಿಕ ಹೇಳಿಕೆ ಮತ್ತು ನಮ್ಮ ಪಕ್ಷದ ಜಾಹಿರಾತುಗಳನ್ನು ಕೊಡುತ್ತೇನೆ ಎಂದರೆ ಸರಿ.  ಆಗ ಸಾಮಾನ್ಯವಾಗಿ ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿ ಪತ್ರಿಕಾಗೋಷ್ಠಿ ಮಾಡುತ್ತೇವೆ, ಬೇಕಾದ ಪತ್ರಿಕೆಯವರು ಪ್ರಕಟಣೆ ಮಾಡುತ್ತಾರೆ ಎನ್ನುತ್ತಾರೆ. ಕರಾವಳಿ ಮುಂಜಾವು ಪತ್ರಿಕೆ ಒಂದು ಪ್ರಮುಖ ಮತ್ತು ಪ್ರಸಿದ್ಧ ಪತ್ರಿಕೆ ಎಂದರೆ ಇರಬಹುದು, ನನಗೆ ಹೇಳಲು ಬರುವುದಿಲ್ಲ. ಕರಾವಳಿ ಮುಂಜಾವು ಪತ್ರಿಕೆಯು, ಕಾರವಾರ, ಗೋವಾ ಮತ್ತು ಕರ್ನಾಟಕ ಅನೇಕ ಭಾಗಗಳಿಗೆ ಹೋಗುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಮನೆಯಲ್ಲಿ ನಾನು ಬೇರೆ ಪತ್ರಿಕೆಗಳನ್ನು ತರಿಸುವಾಗ ಅದರ ಜೊತೆ ಕರಾವಳಿ ಮುಂಜಾವು ಪತ್ರಿಕೆ ಸಹ ತರಿಸುತ್ತೇನೆ ಎಂದರೆ ಇರಬಹುದು. ನಾನು ರಾಜಕೀಯಕ್ಕೆ ಯಾವ ವರ್ಷ ಸೇರಿದ್ದೆ ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ, ಆದರೆ 2008 ಡಿಸೆಂಬರನಲ್ಲಿ ಇರಬಹುದು. ನಾನು ವಕೀಲರ ಬಳಿ ಆಸ್ತಿ ಖರೀದಿಸಲು ಅಭಿಪ್ರಾಯ ಪಡೆಯುವಾಗ ಅವರು ಕೇಳಿದ ಎಲ್ಲಾ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ದಾವಾಸ್ತಿಗೆ ಸಂಬಂಧಪಟ್ಟ ಆರ್.ಎ. 29/1988 ಹಾಗೂ 30/1988 ಆದೇಶದ ಪ್ರತಿಯನ್ನು ವಕೀಲರಿಗೆ ಕೊಟ್ಟಿದ್ದೆನು. ದಾವಾಸ್ತಿ ಖರೀದಿಸುವ ಪೂರ್ವದಲ್ಲಿ ಸದರಿ ಆದೇಶದ ಬಗ್ಗೆ ನನಗೆ ಮಾಹಿತಿ ಇತ್ತು, ಆದರೆ ಅದು ಸರಿ ಇಲ್ಲ ಎಂದೂ ಸಹ ನನಗೆ ಮಾಹಿತಿ ಇತ್ತು. ದಾವಾಸ್ತಿ ಕ್ರಯಪತ್ರದಲ್ಲಿ ಸದರಿ ಆದೇಶದ ಬಗ್ಗೆ ಹಾಗೂ ಕೋರ್ಟ ಕೇಸಿನ ಬಗ್ಗೆ ಬರೆಯುವ ಅವಶ್ಯಕತೆ ಬರಲಿಲ್ಲ. ದಾವಾಸ್ತಿ ಖರೀದಿಸುವ ಪೂರ್ವದಲ್ಲಿ ಹಳೆಯ ದಾವೆಯಲ್ಲಿರುವ ಪಕ್ಷಗಾರರಾದ ವಾದಿಯರನ್ನು ಹಾಗೂ 1ನೇ ವಾದಿಯ ಗಂಡನನ್ನು ಅವರ ಬಗ್ಗೆ ವಿಚಾರಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ  ಅವರಿಗೆ ಅರ್ಧ ಹಕ್ಕು ದಾವೆ ಮಾಡಿ ಪಡೆಯಬೇಕು ಎಂದು ಆದೇಶ ಆಗಿದ್ದು, ಅವರು ಸುಮಾರು ವರ್ಷಗಳಾದರೂ ಸಹ ಪಡೆಯಲಿಲ್ಲ

ಹಾಗೂ ನಂತರ ಅವರು ತೀರಿಕೊಂಡಿದ್ದು ಅವರ ಹಕ್ಕೂ ಸಹ ನಮ್ಮ ಪಾರ್ಟಿಗೆ ಬಂದಿದ್ದರಿಂದ ಅವರಿಂದ ಖರೀದಿ ಮಾಡಿದ್ದೆ ಎನ್ನುವರು. ಸಾಕ್ಷಿ ಮುಂದುವರಿದು ಸುಮಾರು 20 ವರ್ಷಗಳಾಗಿದ್ದರಿಂದ ಅವರ ಹಕ್ಕು ನಷ್ಟ ಆಗಿತ್ತು ಎನ್ನುವರು. ನಾನು 2008 ರಲ್ಲಿ ದಾವಾಸ್ತಿಯನ್ನು ಖರೀದಿಸಿದ್ದೆ. ಆರ್.ಎ. 29/1988 ಹಾಗೂ 30/1988 ರಲ್ಲಿ ಆದೇಶವು 2003 ನೇ ಇಸ್ವಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ 5 ವರ್ಷದಲ್ಲಿ ದಾವಾಸ್ತಿ ಖರೀದಿ ಮಾಡಿದ್ದೇನೆ ಎಂದರೆ ಸರಿ. ದಾವಾಸ್ತಿ ಖರೀದಿಸುವ ಪೂರ್ವದಲ್ಲಿ ವಾದಿಯರಿಗೆ ಅರ್ಧ ಹಕ್ಕು ಇದೆ ಎಂದು ಆದೇಶದಲ್ಲಿ ಬರೆದಿದ್ದರಿಂದ ಅವರಿಗೆ ನೋಟಿಸ್ ನೀಡಬೇಕು ಎಂದು ಪತ್ರಿಕೆಯಲ್ಲಿ ಪ್ರಕಟಣೆ ಕೊಡಬೇಕು ಎಂಬ ಅವಶ್ಯಕತೆ ಕಂಡುಬಂದಿಲ್ಲ.

ದಾವಾಸ್ತಿ ಖಾಲಿ ಜಾಗ ಎಂದರೆ ಸರಿ. ಆದರೆ ನಾನು ಖರೀದಿಸುವಾಗ ಅದರಲ್ಲಿ ಮನೆ ಇತ್ತು. ಈಗ ಅದು ಬಿದ್ದು ಹೋಗಿರುತ್ತದೆ. 2009-10 ರಲ್ಲಿ ಬಿದ್ದು ಹೋಗಿರಬಹುದು. ದಾವಾಸ್ತಿಯ ಕಬಜೆಯನ್ನು ಅಲ್ಲಿ ಕಬಜೆ ಇದ್ದ ಉಳಿದ ಪ್ರತಿವಾದಿಯರು ಕೊಟ್ಟಿದ್ದರು. ಈಗ ದಾವಾಸ್ತಿಯ ಕಬಜೆ ನನ್ನ ಬಳಿ ಇದೆ. ಅಲ್ಲಿದ್ದ ಮನೆ ಬಿದ್ದು ಹೋದ ನಂತರ ಮುನ್ಸಿಪಾಲ್ಟಿಗೆ ತಿಳಿಸಿ ಅದರ ನಂಬರನ್ನು ತೆಗೆದುಹಾಕುವ ಬಗ್ಗೆ ಕ್ರಮ ಕೈಗೊಂಡಿರುತ್ತೇನೆ. ದಾವಾಸ್ತಿಯಲ್ಲಿ ಈಗಾಗಲೇ ನ್ಯಾಯಾಲಯದಲ್ಲಿ ವ್ಯಾಜ್ಯ ಇದ್ದರಿಂದ ಅವರಿಗೆ ನಾನು ಖರೀದಿಸುವ ಬಗ್ಗೆ ಮಾಹಿತಿ ಕೊಡಬೇಕಾಗಿದ್ದರಿಂದ ಪತ್ರಿಕೆಯಲ್ಲಿ ಪ್ರಕಟಣೆ ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಜಮೀನು ಖರೀದಿ ಮಾಡುವಾಗ ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟಿರುವುದಿಲ್ಲ. ದಾವಾಸ್ತಿ ಕ್ರಯಪತ್ರ ಮಾಡುವಾಗ ವಾದಿಯರಿಗೆ ಅರ್ಧ ಹಕ್ಕು ಇದೆ ಎಂದು ಗೊತ್ತಿದ್ದೂ 1 ನೇ ಪ್ರತಿವಾದಿಗೆ ಕೇವಲ ಅರ್ಧ ಹಕ್ಕಿನ ಆಸ್ತಿಗೆ ಹಣವನ್ನು ನೀಡಿ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ ಕೇವಲ ಅರ್ಧ ಹಕ್ಕಿನ ಆಸ್ತಿಯನ್ನು ಮಾತ್ರ ಖರೀದಿ ಮಾಡಿ ದಸ್ತವೇಜು ಬರೆಯುವಾಗ ಮೋಸದಿಂದ ಪೂರ್ತಿ ಆಸ್ತಿಯನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ